# ಟೆಕ್ಕಿ ನಟಿಯಾದ ಕಥೆ

## ದೀಪಾ ಕ್ಷತ್ರಿಯ

ಉದಯದ 'ಗೌರಿಪುರದ ಗಯ್ಯಾಳಿಗಳು' ಮಾಲಿನಿ

◆ **ತೆರೆಯ ಹಿಂದೆ ತಾಂತ್ರಿಕ ಕೆಲಸದ ಬಗ್ಗೆ ಯೋಚನೆ ಮಾಡಿದ್ದೀರಾ?**

ನಟನೆಯನ್ನೇ ಮಾಡಬೇಕು. ಇದರಲ್ಲೇ ಬೆಳವಣಿಗೆಯನ್ನು ಹೊಂದಬೇಕು ಎಂದುಕೊಂಡಿದ್ದೇನೆ. ಮುಂದೊಂದು ದಿನ ನಿರ್ಮಾಣವನ್ನು ಮಾಡಬೇಕು ಎನ್ನುವ ಆಸೆಯೂ ಇದೆ. ಆದರೆ ಅದಕ್ಕೆ ಆತುರವಿಲ್ಲ. ಈ ಕ್ಷೇತ್ರದ ಬಗ್ಗೆ ಸಂಪೂರ್ಣ ತಿಳಿದ ನಂತರವೇ ಆ ಕಡೆ ಹೆಜ್ಜೆ ಇಡುತ್ತೇನೆ. ಸದ್ಯ ಅಭಿನಯದತ್ತ ನನ್ನ ದೃಷ್ಟಿ ನೆಟ್ಟಿದೆ. ಈಗಾಗಲೇ ಸಿನಿಮಾಕ್ಕೂ ಕೆಲವು ಅವಕಾಶಗಳು ಸಿಕ್ಕಿವೆ. ಸದ್ಯ ಸಿನಿಮಾದ ಕಡೆ ಗಮನಕೊಡುತ್ತಿಲ್ಲ. ಧಾರಾವಾಹಿಗಳಿಗೆ ಮಾತ್ರ ಸೀಮಿತವಾಗಿದ್ದೇನೆ.

◆ **ನಿಮ್ಮ ಬೇರೆ ಪಾತ್ರಗಳಿಗೆ ಹೋಲಿಸಿದರೆ ಇದು ಹೇಗೆ ಭಿನ್ನ ಅನಿಸುತ್ತೆ?**

ಅತಿಥಿ ಪಾತ್ರ ಸೇರಿದಂತೆ ದೀರ್ಘಪಾತ್ರಗಳನ್ನೂ ಮಾಡಿದ್ದೇನೆ. ಇದು ನನಗೆ ಮೊದಲ ಪ್ರಧಾನ ಪಾತ್ರ. ಕಥೆಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿರುವ ಪಾತ್ರವೂ ಇದೇ ನನ್ನ ಪಾಲಿಗೆ ಮೊದಲು ಎನ್ನಬಹುದು. ಇದು ಕಾಮಿಡಿ ಅಂಶ ಇರುವ ಕಥೆ. ಇದುವರೆಗೂ ಇಂತಹ ಪಾತ್ರವನ್ನು ನಾನು ಮಾಡಿರಲಿಲ್ಲ. ಹಾಗಾಗಿ ಭಿನ್ನ ಮತ್ತು ಸವಾಲಿನ ಪಾತ್ರ ಕೂಡ. ಇದರಲ್ಲಿ ಕಲಿಯುವುದು ಹೆಚ್ಚಿದೆ. ಬೇರೆ ಧಾರಾವಾಹಿಗಳಲ್ಲಿ ಪಾತ್ರ ಹೇಗಿರುತ್ತೋ ಹಾಗೆಯೇ ಸಾಗುತ್ತದೆ. ಆದರೆ ಮಾಲಿನಿ ಪಾತ್ರ ಹಾಗಿಲ್ಲ. ಇದಕ್ಕೆ ಫಿಕ್ಸ್ ರೂಪ ಇಲ್ಲ. ಒಂದೊಂದು ಪರಿಕಲ್ಪನೆಗೆ ತಕ್ಕಂತೆ ಕಥೆ ವಿಸ್ತಾರ ಆಗುತ್ತದೆ. ಆಗಾಗ ಬೇರೆ ಬೇರೆ ವೇಷವನ್ನು ಹಾಕಬೇಕಾಗುತ್ತದೆ. ಇಲ್ಲವೇ ಕಾಸ್ಟ್ಯೂಮ್ ಬದಲಾಗುತ್ತದೆ. ಅದಕ್ಕೆ ಹೊಂದಿಕೆಯಾಗುವಂತೆ ನಮ್ಮ ದೇಹಭಾಷೆಯನ್ನು ಪರಿವರ್ತಿಸಬೇಕಾಗುತ್ತದೆ. ಈ ಕಾರಣಕ್ಕೆ ಈ ಪಾತ್ರದ ಮೇಲೆ ನನಗೆ ಒಲವು ಹೆಚ್ಚಾಯಿತು. ಕಲಿಯಲು ಬಹುದೊಡ್ಡ ಅವಕಾಶ ಸಿಕ್ಕಿದೆ ಎಂದುಕೊಂಡಿದ್ದೇನೆ. ಆಡಿಷನ್ ನೀಡಿದ ದಿನವೇ ಆಯ್ಕೆ ಮಾಡಿದ್ದಾರೆ ಎನ್ನುವ ಮಾಹಿತಿ ಗೊತ್ತಾಯಿತು.

◆ **ಟೆಕ್ಕಿ – ನಟಿ ಈ ಎರಡು ರಂಗದಲ್ಲಿ ಕಲಿಕೆಯ ವ್ಯತ್ಯಾಸ ಹೇಗಿರುತ್ತದೆ?**

ಎರಡೂ ಕ್ಷೇತ್ರದಲ್ಲಿ ಕಷ್ಟಪಡಲೇಬೇಕು. ಅದರದ್ದೇ ಆದ ಸವಾಲುಗಳನ್ನು ಎದುರಿಸಬೇಕಾಗುತ್ತದೆ. ಟೆಕ್ಕಿಯಾದರೆ 9ರಿಂದ 5ಗಂಟೆಯೊಳಗೆ ಕೆಲಸ ಖಚಿತ, ಜ್ಞಾನಾಧಾರಿತವಾಗಿ ಕೆಲಸ ಮಾಡಬೇಕು. ಅಲ್ಲಿಯ ಹೋರಾಟವೂ ಹಾಗೆಯೇ ಇರುತ್ತದೆ. ಅವಕಾಶ ಮಾಡಿಕೊಂಡು ಹೊಸ ಹೊಸ ಕೋರ್ಸ್‌ಗಳನ್ನು ಕಲಿತು ಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕು. ನಟಿಯಾಗಿ ಸೌಂದರ್ಯ ಮತ್ತು ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ನಟನೆಯನ್ನು ಭಿನ್ನವಾಗಿ ಹೇಗೆ ಮಾಡಬೇಕು ಎನ್ನುವ ಚಿಂತನೆ ಇರುತ್ತದೆ. ಒಂದು ಡೈಲಾಗನ್ನು ಹೇಗೆ ವೀಕ್ಷಕರಿಗೆ ತಟ್ಟುವಂತೆ ಹೇಳಬೇಕು ಎಂದು ಯೋಚಿಸಬೇಕಾಗುತ್ತದೆ.

◆ **ಮುಂದೆ ಎಂತಹ ಪಾತ್ರದ ನಿರೀಕ್ಷೆಯಲ್ಲಿದ್ದೀರಿ?**

ಈ ರೀತಿಯದ್ದೇ ಆದ ಸವಾಲಿನ ಪಾತ್ರವನ್ನು ನಾನು ಬಯಸುತ್ತೇನೆ. ಪಾತ್ರ ಹೇಗೆ ಇದ್ದರೂ ಕಲಿಯಲು ಅವಕಾಶ ಮಾತ್ರ ಇರಲೇಬೇಕು. ಹೊಸತನದಿಂದ ಕೂಡಿರಬೇಕು. ಮುಂದಿನ ಅವಕಾಶಕ್ಕೆ ಹಿಂದಿನ ಪಾತ್ರಗಳೂ ಲೆಕ್ಕಕ್ಕೆ ಬರುತ್ತವೆ. ಆಡಿಷನ್, ಲುಕ್ ಟೆಸ್ಟ್ ಮಾಡಿದಾಗ ಅದೆಲ್ಲ ನಿರ್ಧಾರವಾಗುತ್ತದೆ. ಇದೇ ಪಾತ್ರ ಬೇಕು ಎನ್ನುವ ಬಯಕೆ ನನಗಿಲ್ಲ. ಯಾವುದೇ ಪಾತ್ರ ಸಿಕ್ಕರೂ ಅದಕ್ಕೆ ಜೀವ ತುಂಬುವ ಸವಾಲು ನನ್ನದು.

◆ **ಬಣ್ಣ ಹಚ್ಚಿದಾಗ ಸಂಕೋಚ ಅನ್ನಿಸಿದ್ದು ಇದೆಯಾ?**

ಇದೇ ಮೊದಲು ಪ್ರಧಾನ ಪಾತ್ರ ಮಾಡುತ್ತಿದ್ದೇನೆ. ಇದನ್ನು ಮೊದಲು ಬೇರೆ ಒಬ್ಬರು ನಿರ್ವಹಿಸುತ್ತಿದ್ದರು. ವೀಕ್ಷಕರಿಗೆ ನಟಿ ಬದಲಾದರೂ ಅಭಿನಯದ ವಿಷಯದಲ್ಲಿ ಹೋಲಿಕೆ ಆಗಬೇಕು. ಆ ಸವಾಲು ಮಾಲಿನಿ ಪಾತ್ರದ ಮೂಲಕ ಬಂತು. ತಂಡದಲ್ಲಿದ್ದವರು ಪರಸ್ಪರ ಪರಿಚಿತರು. ನನಗೆ ಮಾತ್ರ ಸಂಪೂರ್ಣ ಹೊಸತು. ಎರಡು ದಿನ ಸಂಕೋಚದ ಭಾವನೆ ಇತ್ತು. ತಂಡದಲ್ಲಿ ಹಿರಿಯ ಕಲಾವಿದರಿಂದ ಕಲಿಯುವುದು ಇತ್ತು. ಏನೇ ಅಂದರೂ ನಗಿಸುವುದು ಕಷ್ಟದ ಕೆಲಸ. ಕ್ರಮೇಣ ಹೊಸ ವಾತಾವರಣಕ್ಕೆ ಹೊಂದಿಕೊಂಡ ಮೇಲೆ ಲೀಲಾಜಾಲವಾಗಿ ನಟನೆಯನ್ನು ಮಾಡುತ್ತಿದ್ದೇನೆ.

◆ **ಟೆಕ್ಕಿ ನಟಿಯಾದ ಕಥೆ ಹೇಳಿ.**

ಮೂಲತಃ ಡಾನ್ಸರ್. ಚಿಕ್ಕವಯಸ್ಸಿನಲ್ಲಿಯೇ ಭರತನಾಟ್ಯವನ್ನು ಅಧ್ಯಯನ ಮಾಡಿದ್ದೆ. ಅದರ ಜೊತೆ ಪಾಶ್ಚಿಮಾತ್ಯ ಡಾನ್ಸ್ ಕೂಡ ಕಲಿತೆ. ಅದೇ ನನಗೆ ನಟನೆಯ ಗೀಳನ್ನು ಹುಟ್ಟಿಸಿತ್ತು. ನಾನು ಎಂಜಿನಿಯರಿಂಗ್ ಮಾಡಿದ್ದೇನೆ. ಅದಕ್ಕೇ ನನ್ನ ಆಸಕ್ತಿಯನ್ನು ಆರಂಭದಲ್ಲಿ ಪೋಷಕರು ಪ್ರೋತ್ಸಾಹಿಸಲಿಲ್ಲ. ಅನಿಶ್ಚಿತವಾದ ಕೆಲಸ ಬೇಡವೇ ಬೇಡ. ಎಂಜಿನಿಯರ್ ಆಗಿಯೇ ಕೆಲಸ ಮಾಡಬೇಕು ಎನ್ನುವ ಒತ್ತಾಯ ಮಾಡಿದರು. ಮೂರು ವರ್ಷ ಟೆಕ್ಕಿಯಾಗಿ ಕೆಲಸವನ್ನೂ ಮಾಡಿದೆ. ಒಂದು ವರ್ಷ ದೆಹಲಿಯಲ್ಲಿದ್ದೆ. ಆ ಕೆಲಸದಲ್ಲಿ ಖುಷಿ ಇರಲಿಲ್ಲ. ಕಷ್ಟಪಟ್ಟು ದುಡಿದಿದ್ದು ಆಯ್ತೇ ಹೊರತು ತೃಪ್ತಿ ಅನ್ನಿಸಲಿಲ್ಲ. ನನ್ನ ಪೋಷಕರ ಖುಷಿಗಾಗಿ ಮಾಡ್ತಾ ಇದ್ದೆ. ದೆಹಲಿಯಿಂದ ಬೆಂಗಳೂರಿಗೆ ಬಂದ ನಂತರ. ಸಣ್ಣಪುಟ್ಟ ಪಾತ್ರಗಳಿಗೆ ಬಣ್ಣ ಹಚ್ಚುವ ಮೂಲಕ ಎರಡನ್ನೂ ನಿಭಾಯಿಸುತ್ತಿದ್ದೆ. ಸ್ಕ್ರೀನ್ ಮೇಲೆ ನನ್ನನ್ನು ನೋಡಿ ನನಗೇ ಖುಷಿ ಆಯಿತು. ಯಾವುದಾದರೂ ಒಂದರಲ್ಲಿ ಮಾಡಬೇಕು ಎಂದು ನಿರ್ಧರಿಸಿ. ನಮ್ಮ ಮನೆಯವರಿಗೆಲ್ಲ ಒಪ್ಪಿಸಿ ಪೂರ್ಣಾವಧಿ ನಟಿಯಾಗಿ ಮಾಲಿನಿ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಈಗ ಪೋಷಕರೂ ಖುಷಿಪಡುತ್ತಿದ್ದಾರೆ.



■ ರಾಘವೇಂದ್ರ ಕೆ.